# ವಾಟ್ಸ್ಆ್ಯಪ್ 'ಚಾಟ್ ಮೆಮೊರಿ'

■ ಶಶಿಕುಮಾರ್ ಸಿ.

'ಚಾಟ್ ಮೆಮೊರಿ' ಹೆಸರಿನ ಹೊಸ ಫೀಚರ್ ಪರಿಚಯಿಸಲು ವಾಟ್ಸ್ಆ್ಯಪ್ ಮುಂದಾಗಿದೆ. ಇದು 'ಮೆಟಾ' ಎಐನ ಭಾಗವಾಗಿ ಕಾರ್ಯನಿರ್ವಹಿಸಲಿದ್ದು, ಬಳಕೆಸ್ನೇಹಿಯಾಗಿರಲಿದೆ.

ವಾಟ್ಸ್ಆ್ಯಪ್ ಬಳಸುತ್ತಿರುವವರು ಎಐ ಚಾಲಿತ ಚಾಟ್‌ಬಾಟ್ ಬಳಸುತ್ತಿದ್ದು, ಇದರ ಮೂಲಕವೇ ಚಾಟ್ ಮೆಮೊರಿ ಪ್ರಯೋಜನ ಪಡೆಯಬಹುದು. ಬಳಕೆದಾರರ ಈ ಹಿಂದಿನ ಚಾಟ್ ಇತಿಹಾಸದ ಬಗ್ಗೆ ಕಣ್ಣಿಡುವ ಈ ಫೀಚರ್, ಹಳತನ್ನು ನೆನಪಿಸಿಕೊಡಲು ನೆರವಾಗಲಿದೆ.

ಚಾಟ್ ಮೆಮೊರಿ ಫೀಚರ್, ಈ ಹಿಂದಿನ ಚಾಟಿಂಗ್, ಮಾತುಕತೆಗಳನ್ನು ನೆನಪಿನಲ್ಲಿಟ್ಟುಕೊಳ್ಳುತ್ತದೆ. ಬಳಕೆದಾರರ ವೈಯಕ್ತಿಕ ಮಾಹಿತಿ, ಹುಟ್ಟುಹಬ್ಬ, ಶಿಫಾರಸ್ಸು, ಶೆಡ್ಯೂಲ್ ಸೇರಿದಂತೆ ಇನ್ನಿತರ ಗಮನಾರ್ಹ ಅಂಶಗಳನ್ನು ಸಂಗ್ರಹಿಸಿ ಆಯಾ ಸಮಯಕ್ಕೆ ನೋಟಿಫಿಕೇಷನ್ ಮೂಲಕ ನೆನಪಿನ ಬುತ್ತಿಗೆ ಕೈಹಾಕಲಿದೆ.

ಸಲಹೆ, ಪ್ರತಿಕ್ರಿಯೆ, ರೆಕಮಂಡೇಷನ್ ಸೇವೆ ಒದಗಿಸುವ ಈ ಫೀಚರ್, ಬಳಕೆದಾರರ ನಿತ್ಯ ಚಟುವಟಿಕೆ ಮತ್ತು ಜೀವನಶೈಲಿ ಮತ್ತು ವಾಟ್ಸ್ಆ್ಯಪ್ ಬಳಕೆಯನ್ನು ಇನ್ನಷ್ಟು ಸರಳೀಕರಣಗೊಳಿಸುತ್ತದೆ. ಅಲ್ಲದೆ ಹಲವರ ಜೊತೆ ಈ ಹಿಂದೆ ಮಾತನಾಡಿದ ಚಾಟಿಂಗ್‌ನಲ್ಲಿರುವಂತಹ ಪ್ರಮುಖ ಅಂಶಗಳನ್ನು ಸಂಗ್ರಹಿಸಿ ಆಗಾಗ್ಗೆ ಆ ಬಗ್ಗೆ ನೆನಪಿಸುತ್ತದೆ.

ಹುಟ್ಟುಹಬ್ಬದ ವಿಷಯಕ್ಕೆ ಬಂದರೆ, ಬಳಕೆದಾರರು ವಾಟ್ಸ್ಆ್ಯಪ್ ಮೂಲಕ ಈ ಹಿಂದೆ ಯಾರಿಗಾದರೂ ಹುಟ್ಟುಹಬ್ಬದ ಶುಭಾಶಯ ಕಳುಹಿಸಿದ್ದರೆ, ಮರುವರ್ಷವೂ ತಾನಾಗಿಯೇ ಆ ಬಗ್ಗೆ ಬಳಕೆದಾರರಿಗೆ ನೆನಪಿಸುತ್ತದೆ. ಇದರಿಂದ ಆತ್ಮೀಯರಿಗೆ ತಪ್ಪದೇ ಶುಭಾಶಯ ಕೋರಲು ಸಹಾಯಕವಾಗಲಿದೆ. ಇದೇ ರೀತಿ ದೈನಂದಿನ ಕಾರ್ಯಗಳ ಬಗ್ಗೆ, ಮೀಟಿಂಗ್‌ಗಳ ಬಗ್ಗೆ ಜಾಗ್ರತೆ ವಹಿಸುವ ಈ ಫೀಚರ್ ಆ ಬಗ್ಗೆ ಸಮಯಕ್ಕೆ ಸರಿಯಾಗಿ ನೆನಪು ಮಾಡಲಿದೆ.

## ಖಾಸಗೀತನದ ಬಗ್ಗೆ ನಿಗಾ

ವಾಟ್ಸ್ಆ್ಯಪ್‌ನ ಚಾಟ್ ಮೆಮೊರಿಯಿಂದ ಬಳಕೆದಾರರ ಖಾಸಗೀತನದ ಬಗ್ಗೆ ಹಲವಾರು ಪ್ರಶ್ನೆಗಳು ಎದುರಾಗುವುದು ಸಹಜ. ಈ ಬಗ್ಗೆಯೂ ಕಂಪನಿ ಕಾಳಜಿ ವಹಿಸಿದೆ. ಚಾಟ್ ಮೆಮೊರಿಗೆ ಯಾವ ಮಾಹಿತಿ ಸೇವ್ ಆಗಬೇಕು ಮತ್ತು ಯಾವ ಮಾಹಿತಿ ಸೇವ್ ಆಗಬಾರದು ಎಂಬುದನ್ನು ಬಳಕೆದಾರರೇ ನಿರ್ಧರಿಸಲು ಅವಕಾಶ ಕಲ್ಪಿಸಿದೆ. ಚಾಟ್ ಮೆಮೊರಿ ಸೇರಿದ ಪಟ್ಟಿಯನ್ನು ಕಾಲಕಾಲಕ್ಕೆ ಪರಿಶೀಲಿಸಿ ಅನಗತ್ಯ ಮತ್ತು ಖಾಸಗೀತನಕ್ಕೆ ಸಂಬಂಧಿಸಿದ ಮಾಹಿತಿಯನ್ನು ತೆಗೆದುಹಾಕಬಹುದು. ಯಾವ ಮಾಹಿತಿ ಸೇವ್ ಆಗಬೇಕು ಎಂಬುದಕ್ಕೂ ನಿಯಂತ್ರಣ ಹೇರುವುದರ ಜೊತೆಗೆ ಸೇವ್ ಆಗಿರುವ ವಿವರವನ್ನು ನೋಡಲು, ಡಿಲೀಟ್ ಮಾಡಲು, ಪರಿಶೀಲಿಸಲು ಇಲ್ಲಿ ಅವಕಾಶ ಇರಲಿದೆ.




ಚಾಟ್ ಮೆಮೊರಿ ಬಗ್ಗೆ ಮೆಟಾ ಎಐ ರಚಿಸಿದ ಚಿತ್ರ

### ಸ್ಕ್ಯಾಮ್‌ಗಳ ಬಗ್ಗೆ ಇರಲಿ ಎಚ್ಚರ

ಮಾರ್ಕ್ ಜುಕರ್‌ಬರ್ಗ್ ಒಡೆತನದ 'ಮೆಟಾ' ತನ್ನ ಮೂರು ಪ್ರಮುಖ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಾದ ವಾಟ್ಸ್ಆ್ಯಪ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಬಳಕೆದಾರರಿಗೆ 'ಆನ್‌ಲೈನ್ ಸ್ಕ್ಯಾಮ್‌ಗಳ ಬಗ್ಗೆ ಎಚ್ಚರವಿರಲಿ' ಎಂಬ ಸುರಕ್ಷತಾ ಅಭಿಯಾನ ಶುರುಮಾಡಿದೆ. ಸೈಬರ್ ಅಪರಾಧ, ಒಟಿಪಿ ಸ್ಕ್ಯಾಮ್, ಪ್ರಮೋಟಿಂಗ್ ಹೆಸರಿನಲ್ಲಿ ವಂಚಿಸುವ ಸುಸಜ್ಜಿತ ಜಾಲದ ಬಗ್ಗೆ ತನ್ನ ಗ್ರಾಹಕರಿಗೆ ಎಚ್ಚರಿಸುವ ಕಾರ್ಯ ಇದಾಗಿದ್ದು, ಇದಕ್ಕೆ ಕೇಂದ್ರ ಸರ್ಕಾರದ ಸಹಭಾಗಿತ್ವವೂ ಇದೆ.

## 'ಲೋ ಲೈಟ್' ವಿಡಿಯೊ

ಮಂದ ಬೆಳಕಿನಲ್ಲಿ ವಿಡಿಯೊ ಕರೆಗಳನ್ನು ಮಾಡುವಾಗ ಅನುಕೂಲವಾಗಲೆಂದು ವಾಟ್ಸ್ಆ್ಯಪ್ 'ಲೋ ಲೈಟ್ ಮೋಡ್' ಫೀಚರ್ ಬಿಡುಗಡೆ ಮಾಡಿದೆ. ಕಡಿಮೆ ಬೆಳಕಿನಲ್ಲಿ ವಿಡಿಯೊ ಕರೆಗಳನ್ನು ಮಾಡುವಾಗ ಈ ಮೋಡ್ ಬಳಸಿ, ಸ್ಪಷ್ಟವಾಗಿ ಕಾಣುವಂತೆ ಮಾಡಬಹುದು. ಉತ್ತಮ ಮತ್ತು ಸ್ಪಷ್ಟ ವಿಡಿಯೊ ಕರೆಗೆ ಇದು ಸಹಾಯಕ; ಹೆಚ್ಚು ಪರಿಣಾಮಕಾರಿಯಾದ ವಿಡಿಯೊ ಅನುಭವಕ್ಕೆ ಪೂರಕ.

ವಾಟ್ಸ್ಆ್ಯಪ್‌ನ ಇತ್ತೀಚಿನ ಆವೃತ್ತಿಗೆ ಆ್ಯಪ್ ಅಪ್‌ಡೇಟ್ ಮಾಡಬೇಕು. ಮಂದ ಬೆಳಕಿನ ವಿಡಿಯೊ ಕರೆಗಳ ಗುಣಮಟ್ಟ ಸುಧಾರಣೆಗೆ ನೆರವಾಗುವ ಈ ಫೀಚರ್‌ನಲ್ಲಿ ಬಳಕೆದಾರರು ಹೊಸ ಫಿಲ್ಟರ್‌ಗಳು ಮತ್ತು ಹಿನ್ನೆಲೆಗಳನ್ನೂ ಬಳಸಬಹುದು. ಅಲ್ಲದೆ, ನಿಮ್ಮ ಸುತ್ತಲಿನ ಬೆಳಕನ್ನು ಸ್ವಯಂಚಾಲಿತವಾಗಿ ಹೊಂದಿಸಿಕೊಂಡು, ವಿಡಿಯೊ ಕರೆಯಲ್ಲಿರುವವರ ಮುಖಕ್ಕೆ ಮಾತ್ರ ಹೆಚ್ಚುವರಿ ಬ್ರೈಟ್‌ನೆಸ್ ಒದಗಿಸುತ್ತದೆ. ಚಿತ್ರದ ಸ್ಪಷ್ಟತೆಯನ್ನು ಕಡಿಮೆ ಮಾಡುವ ಗ್ರೈನಿನೆಸ್ ಅನ್ನು ಕಡಿಮೆ ಮಾಡಿ ಹೆಚ್ಚು ಪ್ರಕಾಶಮಾನತೆ ಕಲ್ಪಿಸುತ್ತದೆ.

ಆ್ಯಕ್ಟಿವೇಟ್ ಮಾಡುವುದು ಹೇಗೆ?: ಲೋ ಲೈಟ್ ಮೋಡ್ ಆ್ಯಕ್ಟಿವೇಟ್ ಮಾಡಲು ಆ್ಯಪ್ ತೆರೆದು ಯಾರಿಗಾದರೂ ವಿಡಿಯೊ ಕರೆ ಮಾಡಿ. ಬಳಿಕ ವಿಡಿಯೊ ಫೀಡ್ ಅನ್ನು ಪೂರ್ಣ ಪರದೆಗೆ ವಿಸ್ತರಿಸಿ, ಬಲಭಾಗದ ಮೇಲ್ಭಾಗದಲ್ಲಿ ಕಾಣುವ 'ಟಾರ್ಚ್' ಚಿಹ್ನೆ ಒತ್ತಿ. ಬೆಳಕನ್ನು ಹೊಂದಿಸಲು ಬಲ್ಬ್ ಚಿಹ್ನೆಯನ್ನು ಕ್ಲಿಕ್ಕಿಸಿ. ಈ ಮೋಡ್ ಐಒಎಸ್ ಮತ್ತು ಆ್ಯಂಡ್ರಾಯ್ಡ್ ಕಾರ್ಯಾಚರಣಾ ವ್ಯವಸ್ಥೆಯಲ್ಲಿ ಲಭ್ಯವಿದ್ದು, ಡೆಸ್ಕ್‌ಟಾಪ್ ಆವೃತ್ತಿಯಲ್ಲಿ ಮಾತ್ರ ಲಭ್ಯವಿಲ್ಲ. ಪ್ರತಿ ಕರೆಗೂ ಲೋ ಲೈಟ್ ಮೋಡ್ ಆ್ಯಕ್ಟಿವೇಟ್ ಮಾಡಿ ಮುಂದುವರೆಯಬೇಕು. ■